ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 388/2018

ಪಿ. ಡಬ್ಲ್ಯು: 04
ಸಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಮ್ಜದ್ ಪಾಷ |
| ತಂದೆ/ಪತಿಯ ಹೆಸರು | ಃ | ಅಲ್ತಾಫ್ |
| ವಯಸ್ಸು | ಃ | 42 ವರ್ಷ |
| ವೃತ್ತಿ | ಃ | ವೆಲ್ಡಿಂಗ್ ಕೆಲಸ |
| ವಾಸ | ಃ | ಕೆ.ಆರ್.ಸಾಗರ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 20.06.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ರಿಂದ 3 ಗೊತ್ತಿಲ್ಲ. ಆರೋಪಿ ಗೊತ್ತು. 2018-19 ಸಾಲಿನಲ್ಲಿ ನಾನು ಬೃಂದಾವನ ಗಾರ್ಡನ್ ಮುಂಭಾಗ ಇರುವ ಪ್ರಸನ್ನ ಕುಮಾರ್ ಎನ್ನುವವರಿಗೆ ಸೇರಿದ ಅಂಗಡಿಯಲ್ಲಿ ಸೋಲರ್ ದೀಪಕ್ಕೆ ಪೈಪ್ ವೆಲ್ಡಿಂಗ್ ಮಾಡುತ್ತಿದ್ದೆ. ಆಗ ಬೆಳಿಗ್ಗೆ ಸುಮಾರು 10.30-11.00 ಸಮಯವಾಗಿತ್ತು.

ಅಲ್ಲಿ ನಡೆದ ಗಲಾಟೆ ಬಗ್ಗೆ ನನಗೆ ಗೊತ್ತಿಲ್ಲ. ಗಲಾಟೆ ಸಂಬಂಧ ನಾನು ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ

ದಿಃ 13.03.2018 ರಂದು ಬೃಂದಾವನ ಗಾರ್ಡನ್ ಪ್ರವೇಶದ ಮುಂಭಾಗವಿರುವ ಪ್ರಸನ್ನ ರವರ ಅಂಗಡಿ ಬಳಿ ನಾನು ಸೋಲಾರ್ ಲೈಟ್ ಸರಿಮಾಡಲು ಹೋಗಿದ್ದೆ ಎಂದರೆ ಸರಿ. ವೆಲ್ಡಿಂಗ್ ಮೆಷಿನ್ ತೆಗೆದುಕೊಂಡು ಹೋಗಿ ಅವರ ಅಂಗಡಿ ಹತ್ತಿರ ಇಟ್ಟು ಕರೆಂಟ್ ಕನೆಷನ್ ಕೇಳಿದ್ದಕ್ಕೆ ಅದಕ್ಕೆ ಪ್ರಸನ್ನ ರವರ ಮಗ ನಿಶ್ಚಿಯ್ ಅಲ್ಲಿ ಹತ್ತಿರದಲ್ಲಿದ್ದ ನೀರಾವರಿ ಇಲಖೆಯ ಶೌಚಾಲಯದಿಂದ ಕರೆಂಟ್ ಕನೆಷನ್ ಕೊಡುತ್ತೇನೆಂದು ಹೋದನು ಎಂದರೆ ಸರಿ. ಆಗ

ಸಮಯ ಬೆಳಿಗ್ಗೆ 11.00-12.00 ಆಗಿತ್ತು ಎಂದರೆ ಸರಿ. ಅಲ್ಲಿ ಶೌಚಾಲಯದ ಹತ್ತಿರ ಮಹಿಳಾ ಪೋಲೀಸರು ಹಾಗೂ ಆರೋಪಿ ನಡುವೆ ಮಾತಿಗೆ ಮಾತು ನಡೆಯುತ್ತಿತ್ತು ಎಂದರೆ ಸುಳ್ಳು. ಆರೋಪಿಗೆ ಮಹಿಳಾ ಪೋಲೀಸರು ಬರಬೇಡಿ ಎಂದು ಪದೇ ಪದೇ ಹೇಳಿದ್ದರೂ ಕೂಡ ಆರೋಪಿ ಪುನಃ ಪುನಃ ಅಲ್ಲಿಗೆ ಹೋಗುತ್ತಿದ್ದನು ಮಹಿಳಾ ಪೋಲೀಸರು ಪ್ರಶ್ನೆ ಮಾಡುತ್ತಿದ್ದರು ಎಂದರೆ ಸುಳ್ಳು. ಮಹಿಳಾ ಪೋಲೀಸರ ಜೊತೆ ಆರೋಪಿ ಅವರಿಗೆ ಅವಮಾನವಾಗುವ ರೀತಿ ನಡೆದುಕೊಂಡು ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿದರು ಎಂದರೆ ಸುಳ್ಳು.

ಪ್ರಸನ್ನ ಕುಮಾರ ಅಲ್ಲಿಗೆ ಹೋಗಿ ತನ್ನ ಮಗನಿಗೆ ಎರಡು ಏಟು ಹೊಡೆದು ಕಳುಹಿಸಿದ್ದರು ಎಂದರೆ ಸುಳ್ಳು. ಆರೋಪಿತನ ವಿರುದ್ದ ಕೆ.ಆರ್.ಸಾಗರ ಪೋಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿರುವುದು ಗೊತ್ತಾಯಿತ್ತು ಮತ್ತು ಗಲಾಟೆ ಸಂಬಂಧ ನಾನು ಪೋಲೀಸರಿಗೆ ನನಗೆ ಈಗ ಓದಿ ಹೇಳಿದಂತೆ ಹೇಳಿಕೆಯನ್ನು ನೀಡಿದ್ದೇನು ಎಂದರೆ ಸರಿಯಲ್ಲ.
ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.